## ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರ ಕಛೇರಿ ಹೊಸ ಸಾರ್ವಜನಿಕ ಕಛೇರಿಗಳು
## ನೃಪತುಂಗ ರಸ್ತೆ ಬೆಂಗಳೂರು-01

ಸಂಖ್ಯೆ: ಸಿ1(8)ವ.ನಿ.ಪಟ್ಟಿ-59/2013-14 ದಿನಾಂಕ:23.10.2013

**ಉಪನಿರ್ದೇಶಕರು (ಆಡಳಿತ)/ಪ್ರಾಂಶುಪಾಲರು, ಸಿ.ಟಿ.ಇ/ಡಯಟ್**
**ಸಾರ್ವಜನಿಕ ಶಿಕ್ಷಣ ಇಲಾಖೆ**
**. . . . . . . . . . . . . . . . ಜಿಲ್ಲೆ**

ಮಾನ್ಯರೇ,

ವಿಷಯ: 2014 ನೇ ವರ್ಷದಲ್ಲಿ 60 ವರ್ಷ ವಯೋಮಿತಿ ಪೂರೈಸಿ, ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಎ ಅಧಿಕಾರಿಗಳ ಮತ್ತು ಬಿ ದರ್ಜೆಯ (Officiating ಆಗಿರುವ ಗ್ರೂಪ್-ಬಿ) ಬೋಧಕ ವೃಂದದ ಅಧಿಕಾರಿಗಳ ಮಾಹಿತಿ ಕಳುಹಿಸಿಕೊಡುವ ಬಗ್ಗೆ.

********

2014 ನೇ ವರ್ಷದಲ್ಲಿ (ದಿ:-01-01-2014 ರಿಂದ 31-12-2014 ರ ಅವಧಿಯಲ್ಲಿ) ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವ, ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್ 'ಎ' ಅಧಿಕಾರಿಗಳ ಬೋಧಕ ವೃಂದದ ಅಧಿಕಾರಿಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅಧಿಕೃತ ಅನುಮತಿಯನ್ನು ಹಾಗೂ 'ಬಿ' ದರ್ಜೆಯ (Officiating ಆಗಿರುವ ಗ್ರೂಪ್-ಬಿ) ನಿವೃತ್ತಿಯಾಗುವ ಬಗ್ಗೆ ಈ ಕಛೇರಿ ಹಂತದಲ್ಲಿ ನಿವೃತ್ತಿ ಹೊಂದಲಿರುವ ಅಧಿಕಾರಿಗಳ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ.

ಆದುದರಿಂದ ನಿಮ್ಮ ಕಛೇರಿಯಲ್ಲಿ/ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಿ 2014 ನೇ ಸಾಲಿನಲ್ಲಿ ಸೇವೆಯಿಂದ ನಿವೃತ್ತರಾಗಲಿರುವ ಗ್ರೂಪ್ ಎ ವೃಂದದ ಅಧಿಕಾರಿಗಳ ಮತ್ತು Officiating ಆಗಿರುವ ಗ್ರೂಪ್-ಬಿ ವೃಂದದ ಬೋಧಕ ವೃಂದದ ಅಧಿಕಾರಿಗಳ, ಸ್ವಯಂ ನಿವೃತ್ತಿ/ಕಡ್ಡಾಯ ನಿವೃತ್ತಿ ಒಳಗೊಂಡಂತೆ ಮಾಹಿತಿಯನ್ನು ಕ್ರೋಢೀಕರಿಸಿ ಈ ಕಛೇರಿಗೆ ಕಳುಹಿಸಲು ಕೋರಿದೆ.

ನಿವೃತ್ತರಾಗಲಿರುವ ಅಧಿಕಾರಿಗಳ ಸೇವಾಪುಸ್ತಕ ಮತ್ತು ಇನ್ನಿತರೆ ದಾಖಲೆಗಳನ್ನು ಪರಿಶೀಲಿಸಿ, ಜನ್ಮ ದಿನಾಂಕ ಮತ್ತು ವಯೋ ನಿವೃತ್ತಿ ಹೊಂದುವ ದಿನಾಂಕಗಳನ್ನು ಕರಾರುವಕ್ಕಾಗಿ ನಮೂದಿಸಿ ಕಳುಹಿಸಲು ತಿಳಿಸಿದೆ. ಮಾಹಿತಿ ನೀಡಿದ ನಂತರ ನಿವೃತ್ತರಾಗುವ ಅಧಿಕಾರಿಗಳು ವರ್ಗಾವಣೆಗೊಂಡರೆ, ವರ್ಗಾವಣೆಗೊಂಡ ಸ್ಥಳದ ಬಗ್ಗೆ ಮಾಹಿತಿಯನ್ನು ಸಹ ತಿಳಿಸುವುದು.

ಕ್ರೋಢೀಕೃತ ಮಾಹಿತಿಯನ್ನು ದಿನಾಂಕ: 25.11.2013 ರ ಒಳಗಾಗಿ ಹಿರಿಯ ಸಹಾಯಕ ನಿರ್ದೇಶಕರು, ಸಿಬ್ಬಂದಿ ಶಾಖೆ-1, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01. ಇವರ ವಿಳಾಸಕ್ಕೆ ಕಳುಹಿಸಲು ಕೋರಿದೆ. ನಿವೃತ್ತರಾಗುವವರು ಯಾರೂ ಇಲ್ಲದಿದ್ದರೆ ಶೂನ್ಯ ವರದಿ ಸಲ್ಲಿಸಲು ಕೋರಿದೆ.

ತಮ್ಮ ನಂಬುಗೆಯ

[ಹೆಚ್.ಎಸ್.ರಾಮರಾವ್]
ಅಪರ ಆಯುಕ್ತರು[ಆ][ಹೆಪ್ರ]

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ
3. ರಾಜ್ಯದ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
5. ಕಛೇರಿ ಪ್ರತಿ.

\\Typing3server\e\D\EST1\R.L-1-1-2014 to 31-12-2014.docx